JANUARY 13, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮಹಾತ್ಮ ಗಾಂಧಿ ನರೇಗಾ ಯೋಜನೆಗೆ ಬದಲಾಗಿ, ಕೇಂದ್ರ ಸರ್ಕಾರ ಜಾರಿ ಗೊಳಿಸಿರುವ, ವಿಕಸಿತ ಭಾರತ; ಜಿ ರಾಮ್ ಜಿ ಕಾಯ್ದೆ ಬಗ್ಗೆ ಚರ್ಚಿಸಲು, ವಿಧಾನಮಂಡಲದ ವಿಶೇಷ ಅಧಿವೇಶನಕ್ಕೆ, ದಿನಾಂಕ ನಿಗದಿ ಪಡಿಸಲು, ನಾಳೆ ಸಚಿವ ಸಂಪುಟದ ತುರ್ತು ಸಭೆ ನಡೆಯಲಿದೆ ಎಂದು, ಉನ್ನತ ಮೂಲಗಳನ್ನು ಉಲ್ಲೇಖಿಸಿ, ವರದಿಗಳು ಬಂದಿವೆ.

<><><>

ಹೊಸ ದಿಲ್ಲಿಯಲ್ಲಿ ನಡೆಯಲಿರುವ, ಗಣರಾಜ್ಯೋತ್ಸವಕ್ಕೆ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ, ಇಬ್ಬರು ಶ್ರೇ ್ಠ ವಿಜ್ಞಾನಿಗಳಿಗೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಆಮಂತ್ರಣ ನೀಡಿದ್ದಾರೆ. ಈ ತಿಂಗಳ 26 ರಂದು, ರಾಷ್ಟ್ರಪತಿ ಭವನದಲ್ಲಿ ನಡೆಯುವ, ಅತಿಥಿ ಸತ್ಕಾರ ಕಾರ್ಯಕ್ರಮದಲ್ಲಿ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿನ ಅತ್ಯುತ್ತಮ ಕೊಡುಗೆಗಾಗಿ, ರಾಷ್ಟ್ರೀಯ ಜೈವಿಕ ವಿಜ್ಞಾನ ಕೇಂದ್ರದ ಪ್ರಮುಖ ವಿಜ್ಞಾನಿ, ದೀಪಾ ಅಘಾಷೆ ಹಾಗೂ ಜೀವಕೋಶಗಳ ಆನುವಂಶಿಕತೆ ಮತ್ತು ಡಿ.ಎನ್.ಎ. ದುರಸ್ಥಿ ಪ್ರಕ್ರಿಯೆ ಕುರಿತು, ಜಾಗತಿಕ ಮಟ್ಟದಲ್ಲಿ ಸಂಶೋಧನೆ ನಡೆಸುತ್ತಿರುವ, ಅಂಜನಾ ಬದರಿನಾರಾಯಣ ಅವರಿಗೆ, ಭಾರತೀಯ ಅಂಚೆ ಇಲಾಖೆ ಅಧಿಕಾರಿಗಳು, ಅಧಿಕೃತ ಆಹ್ವಾನ ಪತ್ರ ತಲುಪಿಸಿದ್ದಾರೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ಬೆಂಗೇರಿ ಖಾದಿ ಗ್ರಾಮೋದ್ಯೋಗ ಸಂಸ್ಥೆಯಲ್ಲಿ, 2 ಕೋಟಿ ರೂಪಾಯಿ ಮೌಲ್ಯದ ರಾಷ್ಟ್ರ ಧ್ವಜಗಳು ಮಾರಾಟವಾಗದೇ ಉಳಿದಿದ್ದು, ಮೂರು ಆಯಾಮಗಳಲ್ಲಿ, ವಿಶೇಷ ಅಭಿಯಾನ ಆಯೋಜಿಸಲಾಗಿದೆ ಎಂದು, ಖಾದಿ ರಾಷ್ಟ್ರ ಧ್ವಜ ಉತ್ತೇಜನಾ ಅಭಿಯಾನದ ಸಂಯೋಜಕ, ಸಂತೋಷ ನರಗುಂದ ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಭಾರತೀಯ ಮಾನಕ ಬ್ಯೂರೋ, ಧ್ವಜ ಸಂಹಿತೆ ಆಧರಿಸಿ ರೂಪಿತ, ರಾಷ್ಟ್ರ ಧ್ವಜ, ಇ–ಕಾಮರ್ಸ್ ಮೂಲಕ, ಆನ್ಲೈನ್‌ನಲ್ಲಿ ಮಾರಾಟಕ್ಕೆ ವ್ಯವಸ್ಥೆ ಮತ್ತು ಪಾಲಿಸ್ಟರ್ ಧ್ವಜ ಮಾರಾಟದ ವಿರುದ್ಧ, ವಕಾಲತ್ತು ವಹಿಸಲಾಗುವುದು, ಎಂದರು. ಗಣರಾಜ್ಯೋತ್ಸವದ ಹಿನ್ನೆಲೆ, ರಾಜ್ಯ ಸರ್ಕಾರ, ರಾಷ್ಟ್ರ ಧ್ವಜ ತಯಾರಿಸುವ ನೇಕಾರರಿಗೆ, ಬಾಕಿ ಎಂ.ಡಿ.ಎ ಹಾಗೂ 130 ಕೋಟಿ ರೂಪಾಯಿ, ಪ್ರೋತ್ಸಾಹ ಧನ ಬಿಡುಗಡೆ ಮಾಡಬೇಕು ಎಂದು, ಸಂತೋಷ ನರಗುಂದ ಆಗ್ರಹಿಸಿದರು.

<><><>

ರಾಜ್ಯದ ಗಡಿ ನೀಲಗಿರಿಯ, ತಮಿಳುನಾಡಿನ ಗುಡಲೂರು ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು, ಲೋಸಕಭೆ ವಿಪಕ್ಷ ನಾಯಕ, ರಾಹುಲ್ ಗಾಂಧಿ, ಹೊಸ ದಿಲ್ಲಿಯಿಂದ, ಇಂದು ಮಧ್ಯಾಹ್ನ 2.20ಕ್ಕೆ, ಮೈಸೂರು ವಿಮಾನ ನಿಲ್ದಾಣಕ್ಕೆ, ಆಗಮಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ರಾಹುಲ ಗಾಂಧಿ ಅವರನ್ನು ಸ್ವಾಗತಿಸಲು,

ಬೆಂಗಳೂರಿನ ಅರಮನೆ ಮೈದಾನದಲ್ಲಿ ಇಂದು ಬೆಳಗ್ಗೆ ಆಯೋಜಿತ, ಪಕ್ಷದ ಸಭೆ ಮುಗಿಸಿಕೊಂಡು, ವಿಶೇ ʼ ವಿಮಾನದಲ್ಲಿ ಮಧ್ಯಾಹ್ನ 1 ಗಂಟೆಗೆ ಮೈಸೂರು ತಲುಪಲಿದ್ದಾರೆ.

<><><>

ಮುಂಬರುವ ಮೂರು ವರ್ಷಗಳಲ್ಲಿ, ರಾಜ್ಯದ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ಸೌರ ಫಲಕಗಳನ್ನು ಅಳವಡಿಸಲಾಗುವುದು ಎಂದು, ಸೆಲ್ಕೋ ಫೌಂಡೇಷನ್ ಸಿ.ಇ.ಓ., ಹರೀಶ ಹಂದೆ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ, ರಾಯಚೂರು, ಕಲಬುರಗಿ, ಯಾದಗಿರಿ ಹಾಗೂ ಬೆಳಗಾವಿ ಸೇರಿದಂತೆ, ಹಲವು ಜಿಲ್ಲೆಗಳ, ಎರಡೂವರೆ ಸಾವಿರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ಐಕಿಯಾ ಮತ್ತು ರಾಜ್ಯ ಸರ್ಕಾರದ ಹಣಕಾಸು ನೆರವಿನಲ್ಲಿ, ಸೌರ ಫಲಕ ಅಳವಡಿಸಲಾಗಿದೆ. ರಾಜ್ಯದ 10 ಲಕ್ಷ ಮಹಿಳೆಯರು, ಸೌರ ವಿದ್ಯುತ್ ಚಾಲಿತ, ಹೊಲಿಗೆ ಯಂತ್ರ, ರೊಟ್ಟಿ ಹಾಗೂ ಖಾರದ ಪುಡಿ ಮಾಡುವ ಯಂತ್ರಗಳನ್ನು ಬಳಸುತ್ತಿದ್ದಾರೆ, ಎಂದರು.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕಿನ, ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ, ಉತ್ತರ ಕರ್ನಾಟಕ, ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಘದ ಕಚೇರಿಗೆ, ಕೇಂದ್ರ ಸಣ್ಣ, ಸೂಕ್ಷ್ಮ ಹಾಗೂ ಮಧ್ಯಮ ಕೈಗಾರಿಕೆಗಳ ಖಾತೆ ರಾಜ್ಯ ಸಚಿವರಾದ, ಶೋಭಾ ಕರಂದ್ಲಾಜೆ, ಭೇಟಿ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಉತ್ತರ ಕರ್ನಾಟಕ ಭಾಗದ 14 ಜಿಲ್ಲೆಗಳ ಎಂ.ಎಸ್.ಎಂ.ಇ. ಗಳಿಗೆ, ಎನ್.ಕೆ.ಎಸ್.ಎಸ್.ಐ. ಸರ್ವೋಚ್ಚ ಸಂಸ್ಥೆಯಾಗಿದೆ. ನಾಲ್ಕು ಸಾವಿರ, ಎಂ.ಎಸ್.ಎಂ.ಇ.ಗಳು ಮತ್ತು 12 ಸಾವಿರಕ್ಕೂ ಹೆಚ್ಚು, ಉದ್ಯೋಗಿಗಳನ್ನು ಪ್ರತಿನಿಧಿಸುತ್ತದೆ. ಸಾವಿರ ಕೋಟಿಗೂ ಹೆಚ್ಚು ಕೊಡುಗೆ ನೀಡುತ್ತಿದೆ, ಎಂದರು.

<><><>

ಮೈಸೂರಿನ ಕಾಸ್ಮಾಲಜಿ ಎಜ್ಯುಕೇಶನ್ ಆಂಡ್ ರಿಸರ್ಚ್ ಟ್ರೇನಿಂಗ್ ಸೆಂಟರ್‌ನಲ್ಲಿ, ತಾರಾಲಯ ಸ್ಥಾಪಿಸಲು, ಕೇಂದ್ರ ಹಣಕಾಸು ವ್ಯವಹಾರಗಳ ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್, 5 ಕೋಟಿ ರೂಪಾಯಿ, ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಯೋಜನೆ ಅಡಿ, ಬಿಡುಗಡೆ ಮಾಡಿದ್ದಾರೆ. ಮೈಸೂರು ಕೊಡಗು ಸಂಸದ, ಯದುವೀರ ಒಡೆಯರ್, ಸಚಿವರನ್ನು ಅಭಿನಂದಿಸಿ, ವಿದ್ಯಾರ್ಥಿಗಳಲ್ಲಿ ಹಾಗೂ ಯುವ ಜನತೆಯಲ್ಲಿ, ಅಂತರಿಕ್ಷ ವಿಜ್ಞಾನದ ಕುರಿತು, ಆಸಕ್ತಿ ಅರಳಿಸಲು, ಸಾಧ್ಯವಾಗಲಿದೆ ಎಂದಿದ್ದಾರೆ.

<><><>

ಭಾರತೀಯ ಮೂಲದ, ಖಗೋಳ ವಿಜ್ಞಾನಿ, ಪ್ರೊಫೆಸರ್ ಶ್ರೀನಿವಾಸ ಕುಲಕರ್ಣಿ ಅವರಿಗೆ, ಲಂಡನ್ನಿನ ರಾಯಲ್ ಖಗೋಳಶಾಸ್ತ್ರ ಸೊಸಾಯಿಟಿ, ಪ್ರತಿಷ್ಠಿತ ಬಂಗಾರ ಪದಕವನ್ನು ಪ್ರಕಟಿಸಿದೆ. ಕ್ಯಾಲಿಫೋರ್ನಿಯಾ ಯೂನಿವರ್ಸಿಟಿಯಲ್ಲಿ ಪ್ರಾಧ್ಯಾಪಕರಾಗಿರುವ, ಶ್ರೀನಿವಾಸ ಕುಲಕರ್ಣಿ, ಗಾಮಾ ಕಿರಣಗಳ ಸ್ವಯಂ ಸ್ಫೋಟದ ಬಗ್ಗೆ ಮಹತ್ವದ ಸಂಶೋಧನೆಗಳನ್ನು ಕೈಗೊಂಡಿದ್ದಾರೆ. ರಾಜ್ಯಸಭೆ ಸಂಸದರಾದ ಸುಧಾ ಮೂರ್ತಿ ಅವರ ಸಹೋದರರು.

<><><>

ಧಾರವಾಡದ, ವಿದ್ಯಾಗಿರಿಯ, ಜೆ.ಎಸ್.ಎಸ್. ಎಸ್.ಡಿ.ಎಂ., ಸಿ.ಬಿ.ಎಸ್.ಇ. ಶಾಲೆಯ ಆವರಣದಲ್ಲಿ, ಇಂದು ಬೆಳಗ್ಗೆಯಿಂದ, ವಿಶೇಷ ಸಂಕ್ರಾಂತಿ ಸಂತೆ ಆರಂಭವಾಗಿದೆ. ಒಟ್ಟು 60 ಮಳಿಗೆಗಳಿದ್ದು, ಧಾರವಾಡದ ರಿಹ್ಯಾಬಿಲಿಟೇಟಿವ್ ಅಸಿಸ್ಟನ್ಸ್ ಫಾರ್ ಪೀಪಲ್ ಇನ್ ಡಿಸ್ಟ್ರೆಸ್ ಸಂಸ್ಥೆ – ರ್‍ಯಾಪಿಡ್ ಹಾಗೂ ವೇದಾ ಸಹಭಾಗಿತ್ವದಲ್ಲಿ, ಹೆಣ್ಣುಮಕ್ಕಳ ಆರ್ಥಿಕ ಸಬಲೀಕರಣಕ್ಕಾಗಿ, ಕರಕುಶಲ ವಸ್ತು ಹಾಗೂ ಸಿರಿಧಾನ್ಯಗಳ ಮೌಲ್ಯವರ್ಧಿತ ಖಾದ್ಯಗಳ ಸಂತೆ ಆಯೋಜಿತವಾಗಿದೆ.

<><><>

ಜನಪದರ ದೃಷ್ಟಿಯಲ್ಲಿ, ಮಕರ ಸಂಕ್ರಮಣ ಆಚರಣೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಜಾನಪದ ವಿದ್ವಾಂಸ, ಹುಬ್ಬಳ್ಳಿಯ ರಾಮಣ್ಣ ಮೂಲಗಿ.

<><><>

ಡಾ. ರಾಮಣ್ಣ ಮೂಲಗಿ ಧ್ವನಿ 36 ಸೆಕೆಂದುಗಳು

<><><>

ಕನ್ನಡ ಸಾಹಿತ್ಯ ಪರಿಷತ್ತು, ಈ ತಿಂಗಳ 30, 31 ಹಾಗೂ ಫೆಬ್ರುವರಿ 1 ರಂದು, ಕನ್ನಡ ಪ್ರವೇಶ, ಕಾವ, ಜಾಣ ಮತ್ತು ರತ್ನ ಪರೀಕ್ಷೆ ನಡೆಸಲಿದೆ. ಧಾರವಾಡ, ಕಲಬುರಗಿ, ಬೀದರ್ ಹಾಗೂ ಮೂಡಬಿದಿರೆ ಸೇರಿದಂತೆ, 13 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ  ಎಂದು, ಪರಿಷತ್ತಿನ ವ್ಯವಸ್ಥಾಪಕ ಪಾರ್ಶ್ವನಾಥ ತಿಳಿಸಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.